ಶ್ರೀ ಹೆಚ್.ಡಿ. ದೇವೇಗೌಡ.—ಪುನರ್‌ವಸತಿ ಕಾರ್ಯಕ್ರಮಗಳಲ್ಲಿ ದೋಷ ಇದ್ದರೆ, ಮಾನ್ಯ ಸದಸ್ಯರು ರಚನಾತ್ಮಕ ಸಲಹೆಗಳನ್ನು ಕೊಟ್ಟರೆ ಸ್ವೀಕಾರ ಮಾಡಲಿಕ್ಕೆ ಸಿದ್ಧನಿದ್ದೇನೆ. ಈ ವಿಚಾರದಲ್ಲಿ ಒಂದು ಸಭೆ ಕರೆದು ಮಾನ್ಯ ಸದಸ್ಯರುಗಳ ಅಭಿಪ್ರಾಯವನ್ನು ತಿಳಿದು, ಅಧಿಕಾರಿಗಳು ತಪ್ಪು ಮಾಡಿದ್ದರೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೪೦೬ (೧೦೦೭) ಸದಸ್ಯರು ಗೈರು ಹಾಜರಿ.

೪೦೭ (೧೦೫೮) ಸದಸ್ಯರು ಗೈರು ಹಾಜರಿ.

ಮೊಳಕಾಲ್ಮೂರಿನಲ್ಲಿ ರೇಷ್ಮೆ ವ್ಯವಸಾಯಅಭಿವೃದ್ಧಿ ಮತ್ತು ಮಾರುಕಟ್ಟೆಯ ಸ್ಥಾಪನೆ

೪೦೮ (೧೦೨೫) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೊಳಕಾಲ್ಮೂರು ಟೌನ್‌ನಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಯೊಂದನ್ನು ಪ್ರಾರಂಭಿಸುವ ಸಲಹೆ ಏನಾದರೂ ಸರ್ಕಾರದವರ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮಗಳೇನು?

ಇ) ಮೊಳಕಾಲ್ಮೂರು ಟೌನ್ ಮೊದಲಿನಿಂದಲೂ ರೇಷ್ಮೆ ಕೈಗಾರಿಕೆಯಲ್ಲಿ ಪ್ರಸಿದ್ಧಿಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಅಲ್ಲಿ ಸರಕಾರದವರು ಸಿಲ್ಕ್ ಫಿಲೇಚರ್ ಕಾರ್ಖಾನೆ ಸ್ಥಾಪಿಸಲು ಕ್ರಮ ಕೈಕೊಳ್ಳುವರೆ?

ಶ್ರೀಮತಿ ಚಂದ್ರಪ್ರಭಾ ಅರಸು (ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬಂದಿದೆ.

ಈ) ಮೊಳಕಾಲ್ಮೂರುವಿನಲ್ಲಿ ಸಣ್ಣ ಪ್ರಮಾಣದ ರೇಷ್ಮೆ ಫಿಲೇಚರನ್ನು ಸ್ಥಾಪಿಸುವ ಸಾಧ್ಯತೆಯ ಬಗ್ಗೆ ಸರಕಾರವು ಪರಿಶೀಲಿಸುವುದು.

ಶ್ರೀ ಎನ್.ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ, ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಹಿಪ್ಪನೇರಳೆ ಸೊಪ್ಪನ್ನು ಹೇರಳವಾಗಿ ಬೆಳೆಯುತ್ತಾರೆ. ಒಂದು ದಿವಸಕ್ಕೆ ೨೦೦ ಕೆ.ಜಿ.ಯಷ್ಟು ಗೂಡು ತಯಾರು ಮಾಡುತ್ತಿದ್ದಾರೆ. ಅಲ್ಲದೆ ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ತಾಲ್ಲೂಕು ಹಾಗೂ ಪಕ್ಕದ ಆಂಧ್ರ ಪ್ರದೇಶಕ್ಕೆ ಸೇರಿದ ಹಳ್ಳಿಗಳಲ್ಲಿ ಕೂಡ ಹೇರಳವಾಗಿ ಹಿಪ್ಪನೇರಳೆ ಬೆಳೆಯುತ್ತಿದ್ದಾರೆ. ಆದಕ್ಕಾಗಿ ಮೊಳಕಾಲ್ಮೂರಿನಲ್ಲಿ ಒಂದು ರೇಷ್ಮೆ ಮಾರುಕಟ್ಟೆಯನ್ನು ಸ್ಥಾಪನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಇದು ಒಳ್ಳೆಯ ಸಲಹೆ ಬಿಡಿ.

410 (1289) Hon. Member was not present.

411 (1103)

MR. SPEAKER.—This question is with held.

QUESTIONS FOR WRITTEN ANSWERS

SRI A. LAKSHMISAGAR.—Sir, I lay on the table of the House the written answers to the questions in twenty-ninth list.

MR. SPEAKER.—Question hour is over.